# 2019-20 ನೇ ಸಾಲಿನ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯ ಅನುಷ್ಠಾನ ಮಾರ್ಗಸೂಚಿ

**ಲೆಕ್ಕ ಶೀರ್ಷಿಕೆ : 2401-00-104-0-12 (059)**

ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ (ZBNF) ಪದ್ಧತಿಯು ಅತಿಯಾದ ರಾಸಾಯನಿಕ ಬಳಕೆಯಿಂದ ಕೂಡಿರುವ ರಾಸಾಯನಿಕ ಕೃಷಿ 'ಹಾಗೂ ಪರಿಸರ ಸ್ನೇಹಿ ಸುಸ್ಥಿರ ಪದ್ಧತಿಯಾಗಿದ್ದರೂ ದುಬಾರಿ ಸಾವಯವ ಪರಿಕರ ಆಧಾರಿತ ಪದ್ಧತಿಯಾಗಿರುವ ಸಾವಯವ ಕೃಷಿ ಪದ್ಧತಿಗಳಿಂದ ವಿಭಿನ್ನವಾಗಿರುತ್ತದೆ. ಅತಿ ಅಲ್ಪ ಖರ್ಚಿನಲ್ಲಿ ಹೆಚ್ಚು ಇಳುವರಿ ಪಡೆಯುವ ಲಾಭದಾಯಕ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯನ್ನು ಮಹಾರಾಷ್ಟ್ರದ ಪ್ರಗತಿಪರ ಕೃಷಿಕರಾದ ಶ್ರೀ ಸುಭಾಷ ಪಾಳೇಕರ್ ರವರು ಅಭಿವೃದ್ಧಿಪಡಿಸಿದ್ದು ಕಳೆದ ಹತ್ತು ವರ್ಷಗಳಿಂದ ಈ ಪದ್ಧತಿಯು ದೇಶಾದ್ಯಂತ ಅನುಚರಣೆಯಲ್ಲಿರುತ್ತದೆ. ಸದರಿ ಪದ್ಧತಿಯು ಇತ್ತೀಚಿಗೆ ವಿಶ್ವದೆಡೆ ಹೆಚ್ಚಿನ ಮಹತ್ವ ಪಡೆಯುತ್ತಿರುವ Regenerative Agriculture ವ್ಯಾಪ್ತಿಯಡಿ ಸೇರಿರುತ್ತದೆ. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯು ಈ ಕೆಳಕಂಡ ನಾಲ್ಕು ಮೂಲ ತತ್ವಗಳ ಆಧಾರದ ಮೇಲೆ ಅವಲಂಬಿವಾಗಿರುತ್ತದೆ.

1. **ಬೀಜಾಮೃತ :** ದೇಶಿ ಹಸುವಿನ ಸಗಣಿ ಹಾಗೂ ಗಂಜಲ ಆಧಾರಿತ ಕಷಾಯಗಳಿಂದ ಬೀಜಗಳ ಲೇಪನ
2. **ಜೀವಾಮೃತ:** ದೇಶಿ ಹಸುವಿನ ಗಂಜಲ, ಸಗಣಿ, ಬೆಲ್ಲ ಹಾಗೂ ದ್ವಿದಳ ಧಾನ್ಯಗಳ ಹಿಟ್ಟಿನ ಮಿಶ್ರಣವನ್ನು ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳ ಸಂಖ್ಯೆಯನ್ನು ವೃದ್ಧಿಸಲು ಬಳಸುವುದು
3. **ಬೆಳೆಗಳ ಹೊದಿಕೆ :** ಭೂಮಿಯನ್ನು ಬೆಳೆಗಳು ಹಾಗೂ ಬೆಳೆ ಶೇಷಗಳಿಂದ ಹೊದಿಸುವುದು
4. **ವಾಘಾಸ :** ಮಣ್ಣಿನ ಹ್ಯೂಮಸ್ ನ್ನು ವೃದ್ಧಿಸಿ ಮಣ್ಣಿನ ವಾಯುಗುಣವನ್ನು ವೃದ್ಧಿಸುವುದು

## ಯೋಜನೆಯ ಉದ್ದೇಶಗಳು:

- ರೈತರಿಗೆ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸಿ ಅಪಾಯ(Risk)ವನ್ನು ಕಡಿಮೆ ಮಾಡುವುದು
- ಅಲ್ಪಾವಧಿ ಹಾಗೂ ದೀರ್ಘಾವಧಿ ಇಳುವರಿಯನ್ನು ಹೆಚ್ಚಿಸುವುದು.
- ರೈತರ ಆದಾಯವನ್ನು ವರ್ಷ ಪೂರ್ತಿ ನಿಯಮಿತಗೊಳಿಸುವುದು.
- ನೈಸರ್ಗಿಕ ರೀತಿಯಿಂದ ಹವಾಮಾನ ವೈಪರೀತ್ಯವನ್ನು ಎದುರಿಸುವುದು,
- ಅನಾವೃಷ್ಟಿ ಹಾಗೂ ಅತಿವೃಷ್ಟಿಯ ಸಂದರ್ಭಗಳಲ್ಲಿ ಉಂಟಾಗುವ ಬೆಳೆ ನಷ್ಟವನ್ನು ಎದುರಿಸಲು ರೈತರನ್ನು ಸಶಕ್ತರನ್ನಾಗಿಸುವುದು.
- ಸುರಕ್ಷಿತ ಹಾಗೂ ಪೌಷ್ಟಿಕ ಆಹಾರ ಉತ್ಪಾದನೆಯನ್ನು ವೃದ್ದಿಸುವುದು.
- ಮಣ್ಣಿನ ಸೂಕ್ಷ್ಮಜೀವಿ, ಪರಿಸರದಲ್ಲಿನ ಸಸ್ಯ ಮತ್ತು ಪ್ರಾಣಿಗಳು, ಜೇನು, ಪಕ್ಷಿಗಳು ಹಾಗೂ ಚಿಟ್ಟೆಗಳ ಸಂಖ್ಯೆಯನ್ನು ವೃದ್ದಿಸಿ ಪರಿಸರದ ಸಂರಕ್ಷಣೆ ಹಾಗೂ ಸುಧಾರಣೆಗೆ ಕ್ರಮ ಕೈಗೊಳ್ಳುವುದು.
- ಸುಸ್ಥಿರ ಅಭಿವೃದ್ಧಿ ಗುರಿಯನ್ನು ಸಾಧಿಸುವುದು.
- ಕೃಷಿ ಉತ್ಪನ್ನಗಳ ರಫ್ತು ಕ್ಷೇತ್ರದಲ್ಲಿ ಉತ್ತಮ ಸಾಮರ್ಥ್ಯವನ್ನು ಹೊಂದುವುದು.
- ರಸಗೊಬ್ಬರಗಳ ಮೇಲಿನ ರಿಯಾಯಿತಿಯನ್ನು ಹಾಗೂ ಆರೋಗ್ಯದ ಮೇಲಿನ ವೆಚ್ಚಗಳನ್ನು ಕಡಿತಗೊಳಿಸುವುದು.

# ಕಾರ್ಯಕ್ರಮ ಅನುಷ್ಠಾನ ಮಾದರಿ (Implementation Structure):

## ಅ. ರಾಜ್ಯ ಮಟ್ಟದ ಸಮಿತಿ :

| ಕ್ರ.ಸಂ. | ವಿವರ | ಸ್ಥಾನ |
|---|---|---|
| 1 | ಮಾನ್ಯ ಕೃಷಿ ಸಚಿವರು | ಅಧ್ಯಕ್ಷರು |
| 2 | ಡಾ॥ ಸುಬ್ರಹ್ಮಣ್ಯ, ಮಾನ್ಯ ಮುಖ್ಯ ಮಂತ್ರಿಯವರ ಆರ್ಥಿಕ ಸಲಹೆಗಾರರು | ಸದಸ್ಯರು |
| 3 | ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 4 | ಕುಲಪತಿಗಳು, ಕೃಷಿ/ತೋಟಗಾರಿಕಾ / ಕೃಷಿ ಮತ್ತು ತೋಟಗಾರಿಕೆ ವಿದ್ಯಾನಿಲಯಗಳು | ಸದಸ್ಯರು |
| 5 | ಕೃಷಿ ಆಯುಕ್ತರು | ಸದಸ್ಯರು |
| 6 | ಕೃಷಿ ನಿರ್ದೇಶಕರು | ಸದಸ್ಯರು |
| 7 | ZBNF ರೈತರು | ಸದಸ್ಯರು |
| 8 | ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) | ಸದಸ್ಯ ಕಾರ್ಯದರ್ಶಿ |

**ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು**

1. ರಾಜ್ಯ ಮಟ್ಟದಲ್ಲಿ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು.
2. ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವುದು.

## ಆ. ರಾಜ್ಯ ಮಟ್ಟದ ಉಪ ಸಮಿತಿ :

| ಕ್ರ.ಸಂ. | ವಿವರ | ಸ್ಥಾನ |
|---|---|---|
| 1 | ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಅಧ್ಯಕ್ಷರು |
| 2 | ಸಂಶೋಧನಾ ನಿರ್ದೇಶಕರು, ಕೃಷಿ/ತೋಟಗಾರಿಕಾ/ಕೃಷಿ ಮತ್ತು ತೋಟಗಾರಿಕೆ ವಿದ್ಯಾನಿಲಯಗಳು | ಸದಸ್ಯರು |
| 3 | ಕೃಷಿ ಆಯುಕ್ತರು | ಸದಸ್ಯರು |
| 4 | ಕೃಷಿ ನಿರ್ದೇಶಕರು | ಸದಸ್ಯರು |
| 5 | ZBNF ರೈತರು | ಸದಸ್ಯರು |
| 6 | ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) | ಸದಸ್ಯ ಕಾರ್ಯದರ್ಶಿ |

**ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು**

1. ನೈಸರ್ಗಿಕ ಕೃಷಿ ಉತ್ತೇಜನ ಕಾರ್ಯಕ್ರಮದ ಅನುಷ್ಠಾನಕ್ಕೆ ಅನುದಾನದ ಬಿಡುಗಡೆಗೆ ಶಿಫಾರಸ್ಸು ಹಾಗೂ ವಿವಿಧ ಕಾರ್ಯಕ್ರಮ/ಘಟಕ/ಕ್ಷೇತ್ರಗಳಿಗೆ ಹಣಕಾಸಿನ ಹಂಚಿಕೆಯನ್ನು ಶಿಫಾರಸ್ಸು ಮಾಡುವುದು.
2. ನೈಸರ್ಗಿಕ ಕೃಷಿ ಉತ್ತೇಜನಕ್ಕಾಗಿ ಸಲ್ಲಿಸಲಾಗುವ ಯೋಜನಾ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದನೆ ನೀಡುವುದು.
3. ಹೊಸ ಯೋಜನೆ/ ಕಾರ್ಯಕ್ರಮಗಳನ್ನು ಗುರುತಿಸಿ ಅನುಷ್ಠಾನಕ್ಕೆ ಇಲಾಖೆಗೆ ಶಿಫಾರಸ್ಸು ಮಾಡುವುದು.

## ಇ. ಇಲಾಖಾ ಮಟ್ಟದ ZBNF ಕೋಶ:

| ಕ್ರ.ಸಂ. | ವಿವರ | ಸ್ಥಾನ |
|---|---|---|
| 1 | ಕೃಷಿ ಆಯುಕ್ತರು | ಅಧ್ಯಕ್ಷರು |
| 2 | ಕೃಷಿ ನಿರ್ದೇಶಕರು | ಸದಸ್ಯರು |
| 3 | ಅಪರ ಕೃಷಿ ನಿರ್ದೇಶಕರು (ಸಾ.ಕೃ. & ZBNF) | ಸದಸ್ಯರು |
| 4 | ಉಪ ಕೃಷಿ ನಿರ್ದೇಶಕರು (ಸಾ.ಕೃ.ಘ) | ಸದಸ್ಯರು |
| 5 | ಕೃಷಿ ಅಧಿಕಾರಿ | ಸದಸ್ಯರು |

**ZBNF ಕೋಶದ ಕರ್ತವ್ಯ ಮತ್ತು ಜವಾಬ್ದಾರಿಗಳು :**

- ನೈಸರ್ಗಿಕ ಕೃಷಿ ಉತ್ತೇಜನ ಕಾರ್ಯಕ್ರಮದ ರೂಪು ರೇಷೆ ಮತ್ತು ಮಾರ್ಗಸೂಚಿ ಸಿದ್ಧಪಡಿಸುವುದು.
- ಆರ್ಥಿಕ ವಿವರಗಳೊಂದಿಗೆ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವುದು.
- ನೈಸರ್ಗಿಕ ಕೃಷಿ ಉತ್ತೇಜನಕ್ಕಾಗಿ ಸಲ್ಲಿಸಲಾಗುವ ಯೋಜನಾ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಷ್ಠಾನಕ್ಕೆ ಶಿಫಾರಸ್ಸು ಮಾಡುವುದು.
- ನೈಸರ್ಗಿಕ ಕೃಷಿಯ ಎಲ್ಲಾ ಪಾಲುದಾರರೊಂದಿಗೆ ಸಮನ್ವಯ ಸಾಧಿಸಿ ರಾಜ್ಯದಲ್ಲಿ ನೈಸರ್ಗಿಕ ಕೃಷಿ ಉತ್ತೇಜನಕ್ಕೆ ವೇದಿಕೆ ಸಿದ್ಧಪಡಿಸುವುದು.
- ನೈಸರ್ಗಿಕ ಕೃಷಿ ಕಾರ್ಯಕ್ರಮಗಳ ಉಸ್ತುವಾರಿ, ಪ್ರಗತಿ ಪರಿಶೀಲನೆ ಹಾಗೂ ಕ್ಷೇತ್ರ ಭೇಟಿ ಕೈಗೊಳ್ಳುವುದು.

## ಈ. ವಲಯ ಮಟ್ಟದ ZBNF ಸಮಿತಿ :

| ಕ್ರ.ಸಂ. | ವಿವರ | ಸ್ಥಾನ |
|---|---|---|
| 1 | ORP ತಂಡದ ಮುಖ್ಯಸ್ಥರು | ಅಧ್ಯಕ್ಷರು |
| | ಬೇಸಾಯಶಾಸ್ತ್ರಜ್ಞ /ತೋಟಗಾರಿಕೆ ವಿಜ್ಞಾನಿ–1 | ಸದಸ್ಯರು |
| | ಕೀಟಶಾಸ್ತ್ರಜ್ಞ –1 | |
| | ಸಸ್ಯರೋಗಶಾಸ್ತ್ರಜ್ಞ –1 | |
| | ಅರ್ಥಶಾಸ್ತ್ರಜ್ಞ/ಸಂಖ್ಯೆಶಾಸ್ತ್ರಜ್ಞ–1 | |
| | ಸೂಕ್ಷ್ಮಾಣು ಜೀವಶಾಸ್ತ್ರಜ್ಞ–1 | |
| | ಮಣ್ಣು ವಿಜ್ಞಾನ ಶಾಸ್ತ್ರಜ್ಞ–1 | |
| | ವಲಯದ ಜಂಟಿ ಕೃಷಿ ನಿರ್ದೇಶಕರು | |
| | ತೋಟಗಾರಿಕಾ ಉಪ ನಿರ್ದೇಶಕರು –1 | |
| | ZBNF ಅಳವಡಿಸಿರುವ ರೈತರುಗಳು (ಪ್ರತಿ ಜಿಲ್ಲೆಗೆ ಒಬ್ಬರಂತೆ) | |
| | ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ–1 | |
| | ORP ತಂಡಕ್ಕೆ ಅವಶ್ಯವಿರುವ ಯಾವುದೇ ವ್ಯಕ್ತಿ–1 | |

**ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು**

- ORP ತಂಡವು ಹಂಚಿಕೆಯಾದ ವಲಯದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ.
- ORP ತಂಡವು ಹಂಚಿಕೆಯಾದ ವಲಯದಲ್ಲಿ ರೈತರ ತಾಕುಗಳಲ್ಲಿ ನೈಸರ್ಗಿಕ ಕೃಷಿಯ ಅನುಷ್ಠಾನಕ್ಕಾಗಿ, ಸಂಶೋಧನಾ ಕೇಂದ್ರಗಳಲ್ಲಿ ನೈಸರ್ಗಿಕ ಕೃಷಿಯನ್ನು ಮೌಲ್ಯಮಾಪನ (Scientific Validation) ಮಾಡಲು ಪ್ರಾಯೋಗಿಕ ಪ್ರಯೋಗಗಳನ್ನು ಕೈಗೊಳ್ಳುವುದು.
- ಪ್ರತಿ ಕೃಷಿ ಹವಾಮಾನ ಆ ವಲಯದಲ್ಲಿ ZBNF Projectನ ಅನುಷ್ಠಾನಕ್ಕೆ ವಾರ್ಷಿಕ ಕ್ರಿಯಾ ಯೋಜನೆ (Annual Action plan) ಸಿದ್ಧಪಡಿಸಿ ರಾಜ್ಯ ಮಟ್ಟದ ಉಪ ಸಮಿತಿಯ ಅನುಮೋದನೆ ಪಡೆಯುವುದು.
- ಆ ವಲಯದಲ್ಲಿ ಕೈಗೊಳ್ಳಬೇಕಾಗಿರುವ ZBNF Projects ಗಳ ವಿಸ್ತೀರ್ಣ ನಿಗಧಿಪಡಿಸುವುದು.
- ಗುರುತಿಸಲಾದ ಯೋಜನಾ ಪ್ರದೇಶದ /ಗ್ರಾಮದ / ರೈತರ ತಾಕುಗಳ ಹಾಗೂ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಪ್ರಾಥಮಿಕ ಸಮೀಕ್ಷೆ (Bench Mark Survey) ಕೈಗೊಳ್ಳುವುದು.
- ಜಿಲ್ಲಾ ಮಟ್ಟದಿಂದ ಯೋಜನಾ ಪ್ರದೇಶದಲ್ಲಿ ಗುರುತಿಸಲಾಗಿರುವ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಂಡಿರುವ ರೈತರನ್ನು Community Assistant (CA) / Community Resource person (CRP) ಗಳನ್ನಾಗಿ ನೇಮಿಸಿ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿಸುವುದು ಹಾಗೂ ಆಯಾ ಕ್ಲಸ್ಟರ್ ನ Trainer of Trainer (TOT) ಆಗಿ ಪರಿವರ್ತಿಸುವುದು.

- ಯೋಜನಾ ಪ್ರದೇಶದಲ್ಲಿ ಆಯ್ಕೆಯಾದ ರೈತರ ತಾಕುಗಳಲ್ಲಿ ಕಾಲಕಾಲಕ್ಕೆ ಸಮೀಕ್ಷೆ ಕೈಗೊಂಡು ಮಾಹಿತಿಯನ್ನು ZBNF website ನಲ್ಲಿ ನಮೂದಿಸುವುದು.
- ZBNF ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳ ಛಾಯಚಿತ್ರ ಮತ್ತು ವೀಡಿಯೋ ದಾಖಲಾತಿ ಮಾಡುವುದು.
- ಯೋಜನೆಯ ಅನುಷ್ಠಾನಕ್ಕಾಗಿ ORP ತಂಡಗಳಿಗೆ ಪಾವತಿಸುವ ಆಡಳಿತ/ಸೇವಾ ವೆಚ್ಚ ಮತ್ತು ಇನ್ನಿತರೆ ವೆಚ್ಚಗಳ (Recurring & Non-recurring Cost) ವಿವರಗಳನ್ನು ಕೃಷಿ / ತೋಟಗಾರಿಕೆ / ಕೃಷಿ & ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಮುಖಾಂತರ ಸಲ್ಲಿಸುವುದು.
- ರೈತರ ತಾಕುಗಳ ಸಮೀಕ್ಷೆ ಹಾಗೂ ಪ್ರಾಯೋಗಿಕ ಪ್ರಯೋಗಗಳ ಫಲಿತಾಂಶಗಳ ಕುರಿತು ಪ್ರತಿ ಹಂಗಾಮಿಗೆ ಸಂಶೋಧನಾ ಲೇಖನಗಳನ್ನು ಹೊರತರುವುದು.

## ಊ. ಜಿಲ್ಲಾ ಮಟ್ಟದ ಸಮಿತಿ :

| ಕ್ರಸಂ. | ವಿವರ | ಸ್ಥಾನ |
|---|---|---|
| 1 | ಜಂಟಿ ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2 | ಉಪ ನಿರ್ದೇಶಕರು (ತೋಟಗಾರಿಕೆ) | ಸದಸ್ಯರು |
| 3 | ಉಪ ನಿರ್ದೇಶಕರು (ಪಶುಸಂಗೋಪನೆ) | ಸದಸ್ಯರು |
| 4 | ಉಪ ನಿರ್ದೇಶಕರು (ರೇಷ್ಮೆ) | ಸದಸ್ಯರು |
| 5 | ZBNF ರೈತರು | ಸದಸ್ಯರು |
| 6 | ಸಹಾಯಕ ಕೃಷಿ ನಿರ್ದೇಶಕರು–ಸಾವಯವ ಸಮನ್ವಯ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

**ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು**

- ಜಿಲ್ಲಾದ್ಯಾಂತ ನೈಸರ್ಗಿಕ ಕೃಷಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ.
- ಜಿಲ್ಲೆಗೆ ಹಂಚಿಕೆಯಾಗಿರುವ ಪ್ರದೇಶಕ್ಕೆ ಅನುಗುಣವಾಗಿ ಯೋಜನಾ ಪ್ರದೇಶವನ್ನು ಆಯ್ಕೆಮಾಡಿ ORP ತಂಡದ ಅನುಮೋದನೆ ಪಡೆಯುವುದು.
- ಯೋಜನಾ ಪ್ರದೇಶದಲ್ಲಿ/ಜಿಲ್ಲೆಯಲ್ಲಿ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಂಡಿರುವ ರೈತರನ್ನು ಗುರುತಿಸಿ CA ಹಾಗೂ CRP ಗಳನ್ನಾಗಿ ನೇಮಿಸಲು ORP ತಂಡದ ಅನುಮೋದನೆ ಪಡೆಯುವುದು
- CA ಹಾಗೂ CRP ಗಳ ಮೂಲಕ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳಲು ಆಸಕ್ತಿ ಇರುವ ರೈತರನ್ನು ಗುರುತಿಸುವುದು.
- ಆಯ್ಕೆಗೊಂಡ ರೈತರಿಗೆ ZBNF ಅಳವಡಿಸಿಕೊಳ್ಳಲು ಸಹಾಯಧನವನ್ನು ಸರ್ಕಾರದ ಮಾನದಂಡಗಳಂತೆ DBT ಮುಖಾಂತರ ಪಾವತಿಸುವುದು
- ZBNF ಯೋಜನಾ ಪ್ರದೇಶದ ಕ್ಲಸ್ಟರ್‌ವಾರು ವಾರ್ಷಿಕ ಕ್ರಿಯಾ ಯೋಜನೆಯನ್ನು ಅಂತಿಮಗೊಳಿಸಿ, ORP ತಂಡದ **ಅನುಮೋದನೆ** ಪಡೆಯುವುದು.
- ಪ್ರತಿ ವರ್ಷದ ಅನುಮೋದಿತ ಕ್ರಿಯಾಯೋಜನೆಯ ಕಾರ್ಯಕ್ರಮ/ಘಟಕಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡುವುದು.
- ಜಿಲ್ಲೆಯ ಎಲ್ಲಾ ಅಭಿವೃದ್ಧಿ ಇಲಾಖೆಗಳ ರೈತರು ಹಾಗೂ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ಒಗ್ಗೂಡಿಸಿ ಯೋಜನಾ ಪ್ರದೇಶದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು. ಉದಾ: ಪಶು ಸಂಗೋಪನಾ, ಹೈನುಗಾರಿಕೆ, ತೋಟಗಾರಿಕೆ, ಮೀನುಗಾರಿಕೆ, ಜಲಾನಯನ, ಅರಣ್ಯ ಇಲಾಖೆ ಇತರೆ.

## ಊ. ಕ್ಲಸ್ಟರ್ ಮಟ್ಟದ ಸಮಿತಿ :

| ಕ್ರ.ಸಂ. | ವಿವರ | ಸ್ಥಾನ |
|---|---|---|
| 1 | ಸಹಾಯಕ ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2 | RA- ಸಂಶೋಧಕ ಸಹಾಯಕ | ಸದಸ್ಯರು |
| 3 | ರೈತರ ಪ್ರತಿನಿಧಿ–1 | ಸದಸ್ಯರು |
| 4 | CA- Community Assistant (ಕ್ಷೇತ್ರ ಸಹಾಯಕರು) | ಸದಸ್ಯರು |
| 5 | CRP- Community Resource person | ಸದಸ್ಯರು |
| 6 | ಕೃಷಿ ಅಧಿಕಾರಿ–ರೈತ ಸಂಪರ್ಕ ಕೇಂದ್ರ | ಸದಸ್ಯ ಕಾರ್ಯದರ್ಶಿ |
| 7 | ಹೋಬಳಿ ಮಟ್ಟದ ತೋಟಗಾರಿಕೆ ಇಲಾಖೆಯ ಅಧಿಕಾರಿ | ಸದಸ್ಯರು |
| 8 | ಹೋಬಳಿ ಮಟ್ಟದ ರೇಷ್ಮೆ ಇಲಾಖೆಯ ಅಧಿಕಾರಿ | ಸದಸ್ಯರು |
| 9 | ಹೋಬಳಿ ಮಟ್ಟದ ಪಶುಸಂಗೋಪನೆ ಇಲಾಖೆಯ ಅಧಿಕಾರಿ | ಸದಸ್ಯರು |

**ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು**

- ORP ತಂಡದ ನೇತೃತ್ವ / ಮಾರ್ಗದರ್ಶನದ ಮೇರೆಗೆ ಯೋಜನಾ ಪ್ರದೇಶದ ವ್ಯಾಪ್ತಿಯ RA ಗಳ ಮುಖಾಂತರ CA ಮತ್ತು CRP ಗಳು ಕಾರ್ಯ ನಿರ್ವಹಿಸುವುದು.
- ಕ್ಲಸ್ಟರ್ ಮಟ್ಟದಲ್ಲಿ ನೈಸರ್ಗಿಕ ಕೃಷಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ.
- ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳಲು ಆಸಕ್ತಿ ಇರುವ ರೈತರನ್ನು ಗುರುತಿಸುವುದು.
- ಮೂಲ ಸಮೀಕ್ಷೆ ಆಧಾರದ ಮೇಲೆ, ಫಲಾನುಭವಿ ರೈತರುಗಳ ಬೇಡಿಕೆ ಹಾಗೂ ಯೋಜನಾ ಅನುಷ್ಠಾನ ಪ್ರದೇಶದ ಅವಶ್ಯಕತೆಗನುಗುಣವಾಗಿ ವಾರ್ಷಿಕ ಕ್ರಿಯಾ ಯೋಜನೆ ಸಿದ್ದಪಡಿಸುವುದು.
- ವ್ಯಾಪ್ತಿಯ ರೈತರುಗಳನ್ನು ನೈಸರ್ಗಿಕ ಕೃಷಿ ತಾಕುಗಳಿಗೆ ಭೇಟಿ/ಪ್ರವಾಸ ಕೈಗೊಳ್ಳಲು ನೆರವು ನೀಡುವುದು.
- ಕಾಲಕಾಲಕ್ಕೆ ಆಯ್ಕೆಯಾದ ರೈತರುಗಳಿಗೆ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳಲು ಅವಶ್ಯವಿರುವ ತರಬೇತಿ, ಮಾರ್ಗದರ್ಶನ, ಪ್ರೋತ್ಸಾಹ ನೀಡುವುದು.
- ಯೋಜನಾ ಪ್ರದೇಶದ ಮಣ್ಣು ಮಾದರಿ ಸಂಗ್ರಹಿಸುವುದು ಹಾಗೂ ವಿಶ್ಲೇಷಣೆಯನ್ನು ರಾಜ್ಯ / ಕೇಂದ್ರ / ICAR / SAU ಪ್ರಯೋಗಾಲಯಗಳಲ್ಲಿ ಮಾಡಿಸುವುದು.
- ಗ್ರಾಮ/ ಸ್ಥಳದ ರೈತರುಗಳ ಮಣ್ಣು ಮತ್ತು ನೀರು ಮಾದರಿಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಗೆ ಕ್ರಮ ಕೈಗೊಳ್ಳುವುದು.
- ಪರೀಕ್ಷೆ ಫಲಿತಾಂಶದ ಆಧಾರದ ಮೇಲೆ ಗುಂಪಿನ ಸದಸ್ಯರುಗಳಿಗೆ ಸೂಕ್ತ ನೈಸರ್ಗಿಕ ಕೃಷಿ ಉತ್ಪಾದನಾ ತಾಂತ್ರಿಕತೆಗಳ ಬಗ್ಗೆ ಮಾರ್ಗದರ್ಶನ ಮತ್ತು ಮಾಹಿತಿ ನೀಡುವುದು.
- CRP ಯು ವ್ಯಾಪ್ತಿಯ ಪ್ರತಿ ಸದಸ್ಯರ ಕ್ಷೇತ್ರಗಳಿಗೆ ತಪಾಸಣಾ ಭೇಟಿ ನೀಡುವುದು ಮತ್ತು ಆ ಪ್ರದೇಶಕ್ಕೆ ಸೂಕ್ತ ಬೆಳೆ ಪದ್ಧತಿ ಅನುಸರಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.
- ತಪಾಸಣಾ ಭೇಟಿಯಲ್ಲಿ ಕಂಡುಬಂದ ಅಂಶಗಳನ್ನು/ವಿವರಗಳನ್ನು CA ಅವರು ಡೈರಿಯಲ್ಲಿ ನಮೂದಿಸಿಕೊಳ್ಳುವುದು.
- ಆಯ್ದ ರೈತರುಗಳ ಕ್ಷೇತ್ರಗಳಿಂದ ಸಾವಯವ ಉತ್ಪನ್ನಗಳ ಮಾದರಿ ಸಂಗ್ರಹಿಸಿ ವಿಶ್ಲೇಷಣೆಗಾಗಿ (Residue Analysis) ನಿಗಧಿಪಡಿಸಿದ ಪ್ರಯೋಗಾಲಯಗಳಿಗೆ ಕಳುಹಿಸಿಕೊಡುವುದು.

## ಯೋಜನೆ ಅನುಷ್ಠಾನಕ್ಕಾಗಿ ಸ್ಥಳ ಆಯ್ಕೆ ಮಾನದಂಡಗಳು

- ರಸಗೊಬ್ಬರಗಳು ಮತ್ತು ಕೀಟನಾಶಕಗಳ ಕನಿಷ್ಠ ಬಳಕೆ ಪ್ರದೇಶಗಳಾದ ಗುಡ್ಡುಗಾಡು, ಬುಡಕಟ್ಟು ಜನಾಂಗಗಳ ಪ್ರದೇಶ ಹಾಗೂ ಮಳೆಯಾಶ್ರಿತ ಪ್ರದೇಶಕ್ಕೆ ಆಧ್ಯತೆ ನೀಡುವುದು.
- ಆ ಪ್ರದೇಶದ ಸಾವಯವ ಸಂಪನ್ಮೂಲ ಉತ್ಪಾದನಾ ಸಾಮರ್ಥ್ಯ
- ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಯತೆ ಇರುವಿಕೆ
- ಪ್ರಚಲಿತ ಮಿಶ್ರ ಬೇಸಾಯ ಪದ್ಧತಿಗಳು : ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ, ಜೇನು ಸಾಕಾಣಿಕೆ, ಮೀನು ಸಾಕಾಣಿಕೆ ಇತ್ಯಾದಿ.
- ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರುಗಳ ಇರುವಿಕೆ.
- ವಿವಿದ್ದೋದ್ದೇಶ ವೃಕ್ಷಗಳ ಸಾಂದ್ರತೆ.
- ಪ್ರಸ್ತುತ ರೈತರು ಅನುಸರಿಸುತ್ತಿರುವ ನೈಸರ್ಗಿಕ/ಸಾವಯವ ಕೃಷಿ ಬೇಸಾಯದ ಮಟ್ಟ.
- ರೈತರ ಗುಂಪುಗಳು / ಸ್ವಸಹಾಯ ಗುಂಪುಗಳ ಇರುವಿಕೆ.
- ನೈಸರ್ಗಿಕ ಕೃಷಿ ಪದ್ಧತಿಗೆ ಪರಿವರ್ತನೆಗೊಳ್ಳಲು ರೈತರುಗಳ ಪೂರ್ಣ ಒಪ್ಪಿಗೆ.
- ಸಮಗ್ರ ಪೀಡೆ ನಿರ್ವಹಣಾ ಕಾರ್ಯಕ್ರಮದಡಿಯಲ್ಲಿ ರೈತರ ಕ್ಷೇತ್ರ ಪಾಠಶಾಲೆ ಇರುವ ಗ್ರಾಮಗಳು.

**ಅನುಷ್ಠಾನ ಮಾರ್ಗಸೂಚಿ :**

## I. ಕೃಷಿ ವಿಶ್ವವಿದ್ಯಾಲಯಗಳು–ಸಂಶೋಧನಾ ಕೇಂದ್ರಗಳು

1. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯನ್ನು ರಾಜ್ಯದ ಎಲ್ಲಾ 10 ಕೃಷಿ ಹವಾಮಾನ ವಲಯಗಳಲ್ಲಿ ಅನುಷ್ಠಾನಗೊಳಿಸುವುದು.
2. ಪ್ರತಿ ಕೃಷಿ ಹವಾಮಾನ ವಲಯಕ್ಕೆ ಅನುಗುಣವಾಗುವಂತೆ Operational Research Project (ORP) ತಂಡಗಳನ್ನು ರಚಿಸುವುದು.
3. ಪ್ರತಿ ಕೃಷಿ ಹವಾಮಾನ ವಲಯದಲ್ಲಿ ಆಯಾ ವ್ಯಾಪ್ತಿಯ ಕೃಷಿ / ತೋಟಗಾರಿಕಾ ವಿಶ್ವವಿದ್ಯಾನಿಲಯಗಳು ವಲಯವಾರು ರಚಿಸುವ ORP ತಂಡಗಳ ಮುಖಾಂತರ ರೈತರ ತಾಕುಗಳಲ್ಲಿ ಮತ್ತು ಸಂಶೋಧನಾ ಕೇಂದ್ರಗಳಲ್ಲಿ ZBNF ಪ್ರಾಯೋಗಿಕ ಪ್ರಯೋಗಗಳ ಅನುಷ್ಠಾನ ಮಾಡುವುದು.
4. ORP ತಂಡಗಳು ವಲಯಕ್ಕೆ ಸೂಕ್ತವಾದ ಸಂಶೋಧನಾ ಕೇಂದ್ರದಲ್ಲಿ ವಲಯದ ಪ್ರಮುಖ ಬೆಳೆಗಳಿಗೆ ಪ್ರಯೋಗವನ್ನು ಕೈಗೊಂಡು, ಈ ಕೆಳಕಂಡ ಉಪಚಾರಗಳನ್ನು ಅಳವಡಿಸುವುದು.
   a. Control
   b. 100% Organic farming.
   c. ZBNF
   d. Conventional method (As per recommended package of practices)
5. ಪ್ರಾಯೋಗಿಕ ಪ್ರಯೋಗಗಳನ್ನು ವಲಯದ ಸಂಶೋಧನಾ ಕೇಂದ್ರದಲ್ಲಿ ಕೈಗೊಳ್ಳಲು ಬೇಕಾಗುವ ಸಂಪೂರ್ಣ ವೆಚ್ಚದ (ಮಾನವ ಸಂಪನ್ಮೂಲ ಒಳಗೊಂಡಂತೆ) ಮಾಹಿತಿಯನ್ನು ಕ್ರೋಡೀಕರಿಸಿ ಯೋಜನಾ ಪ್ರಸ್ತಾವನೆಯನ್ನು ತಯಾರಿಸಿ (DPR), ORP ತಂಡದ ಮುಖ್ಯಸ್ಥರು ಸಂಬಂಧಿಸಿದ ಕೃಷಿ ವಿಶ್ವ ವಿದ್ಯಾನಿಲಯಗಳ ಮುಖಾಂತರ ಕೃಷಿ ಆಯುಕ್ತಾಲಯಕ್ಕೆ ಸಲ್ಲಿಸಿ, ರಾಜ್ಯ ಮಟ್ಟದ ಉಪ ಸಮಿತಿಯ ಅನುಮೋದನೆ ಪಡೆದು ಪ್ರಯೋಗಗಳನ್ನು ಕೈಗೊಳ್ಳುವುದು.

6. ZBNF protocol ಸಿದ್ಧಪಡಿಸಲು ಸಲಹೆಗಾರರಾಗಿ ನೇಮಿಸಲಾಗಿರುವ ಡಾ॥ ಪ್ರಭಾಕರ ಶೆಟ್ಟಿ ಇವರ ಸಹಯೋಗದೊಂದಿಗೆ ZBNF ಪ್ರಾಯೋಗಿಕ ಪ್ರಯೋಗಗಳನ್ನು ಕೈಗೊಳ್ಳುವುದು.
7. ZBNF ಅನುಷ್ಠಾನಕ್ಕೆ ಮೊದಲು ಮತ್ತು ಕೊಯ್ಲಿನ ನಂತರ ಮಣ್ಣು ಮಾದರಿಯನ್ನು ಸಂಗ್ರಹಿಸಿ, ಭೌತಿಕ/ರಾಸಾಯನಿಕ/ಜೈವಿಕ ಗುಣಧರ್ಮಗಳಿಗೆ (3–4 replications) ವಿಶ್ಲೇಷಣೆ ಮಾಡುವುದು. ಎಲ್ಲಾ ವಲಯಗಳ ಮಣ್ಣು ಮಾದರಿ ಸಂಗ್ರಹಣೆ/ವಿಶ್ಲೇಷಣೆಯನ್ನು ಒಂದೇ ಅವಧಿಯಲ್ಲಿ ಮಾಡುವುದು.
8. ಪ್ರಯೋಗ ಕೈಗೊಳ್ಳುವಾಗ ಆದ್ಯತೆ ಮೇರೆಗೆ ಈ ಕೆಳಕಂಡ ಅಂಶಗಳನ್ನು ದಾಖಲಿಸುವುದು.
   - ✓ Cost of cultivation in format
   - ✓ Quality – Capturing data in multiple cropping system (Standard way of collecting data for mono crop to be followed)
   - ✓ Soil parameters – Physical / Chemical / Biological(Soil respiration)
9. ಪ್ರಯೋಗಗಳ ಉಪಚಾರಗಳ ಮಧ್ಯೆ ಅಂತರ (*Isolation distance)* ಕಾಪಾಡುವುದು.
10. ಪ್ರಾಯೋಗಿಕ ಪ್ರಯೋಗ (Experimential Trails) ಗಳಿಂದ ಹೊರಹೊಮ್ಮುವ ಅಂಕಿ ಅಂಶಗಳ ಮೇರೆಗೆ ಫಲಿತಾಂಶಗಳನ್ನು ಅಂತಿಮಗೊಳಿಸಿ, ಪ್ರತಿ ಕೃಷಿ ವಿಶ್ವವಿದ್ಯಾನಿಲಯವು (ಅಧೀನ ಸಂಶೋಧನಾ ಕೇಂದ್ರಗಳನ್ನೊಳಗೊಂಡಂತೆ) ಸಂಯೋಜಿತ ವರದಿಯನ್ನು ಸಲ್ಲಿಸುವುದು ಹಾಗೂ ಪ್ರತಿ ಮಾಹೆಗೆ ಪ್ರಯೋಗಗಳ ಪಲಿತಾಂಶಗಳನ್ನು observation sheets ನಲ್ಲಿ ಸಲ್ಲಿಸುವುದು.
11. ZBNF ಪ್ರಾಯೋಗಿಕ ಪ್ರಯೋಗಗಳ (Experimential Trails) ಫಲಿತಾಂಶಗಳ ಮಂಡನೆ (Presentation of results) ಮತ್ತು ಪ್ರತಿ ಸಂಶೋಧನಾ ಕೇಂದ್ರದಿಂದ ಈ ಕೆಳಕಂಡ ವಿಷಯಗಳನ್ನು ಕುರಿತ ಕನಿಷ್ಠ 4 ಲೇಖನಗಳನ್ನು ಹೊರತರುವುದು. (Bringing out Result Papers).
   - Soil conditions
   - Yield parameter
   - Cost of cultivation
   - Multiple crops

## II. ಕೃಷಿ ವಿಶ್ವವಿದ್ಯಾಲಯಗಳು– ರೈತರ ತಾಕುಗಳು

1. ORP ತಂಡವು ಪ್ರತಿ ವಲಯಕ್ಕೆ ನಿಯೋಜಿಸಿರುವ ಸಂಶೋಧಕ ಸಹಾಯಕರು (RA), CA ಮತ್ತು CRP ಗಳಿಗೆ ತರಬೇತಿ ಮತ್ತು ಕ್ಷೇತ್ರ ಭೇಟಿಯನ್ನು ಆಯೋಜಿಸುವುದು.
2. ಆಯಾ ಜಿಲ್ಲೆಯಲ್ಲಿ ಆಯ್ಕೆ ಮಾಡುವ ZBNF ಅಳವಡಿಸಿರುವ ರೈತರನ್ನು ಸಂಬಂಧಪಟ್ಟ ORP ತಂಡವು ಅಂತಿಮಗೊಳಿಸಿ, ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವುದು.
3. ORP ತಂಡವು ನೇಮಕಾತಿ ಮಾಡಿರುವ ಸಂಶೋಧಕ ಸಹಾಯಕರು (RA) ಸಂಶೋಧನಾ ಕೇಂದ್ರಗಳಲ್ಲಿನ **ಪ್ರಾಯೋಗಿಕ ಪ್ರಯೋಗಗಳ ಕರ್ತವ್ಯಗಳನ್ನು ಒಳಗೊಂಡಂತೆ,** CA ಮತ್ತು CRP ಗಳ ಸಹಯೋಗದೊಂದಿಗೆ ಯೋಜನಾ ಪ್ರದೇಶ/ಗ್ರಾಮದ ರೈತರ ತಾಕುಗಳ ಮೂಲ ಸಮೀಕ್ಷೆ (Baseline survey) ಕೈಗೊಳ್ಳುವುದು ಹಾಗೂ ತಾಕುಗಳಿಗೆ ಕಾಲಕಾಲಕ್ಕೆ ಭೇಟಿ ನೀಡಿ, ಸಮೀಕ್ಷೆ ಕೈಗೊಂಡು ಮಾಹಿತಿಯನ್ನು ZBNF website ನಲ್ಲಿ ನಮೂದಿಸುವುದು.
4. CA ಮತ್ತು CRP ಗಳ ದಿನಚರಿ ಮತ್ತು ಹಾಜರಾತಿಯನ್ನು ದೃಢೀಕರಿಸುವುದು.
5. ಕೃಷಿ ವಿಶ್ವವಿದ್ಯಾಲಯಗಳ ಮೂಲಕ ರಚಿಸಿರುವ **ORP** ತಂಡ/ನೇಮಕವಾಗಿರುವ **RA** ಗಳು, ಇಲಾಖಾ ಅಧಿಕಾರಿಗಳು ಮತ್ತು **CA/CRP** ಗಳೊಂದಿಗೆ ಸಮನ್ವಯ ಸಾಧಿಸಿ ರೈತರ ಕ್ಷೇತ್ರಗಳಲ್ಲಿ **ZBNF** ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುವುದು.

6. ಪ್ರತಿ ಕೃಷಿ ಹವಾಮಾನ ವಲಯದಲ್ಲಿ ಆಯಾ ಜಿಲ್ಲಾ ವ್ಯಾಪ್ತಿಯ ಜಂಟಿ ಕೃಷಿ ನಿರ್ದೇಶಕರುಗಳ/ ಜಿಲ್ಲಾ ತೋಟಗಾರಿಕಾ ಅಧಿಕಾರಿಗಳು ಆಯ್ಕೆ ಮಾಡುವ ರೈತರ ತಾಕುಗಳನ್ನು ORP ತಂಡವು ಅಂತಿಮಗೊಳಿಸುವುದು.
7. ORP ತಂಡವು ರೈತರ ತಾಕುಗಳ ಮೂಲ ಸಮೀಕ್ಷೆ (Baseline survey) ಹಾಗೂ ಯೋಜನಾ ಅನುಷ್ಠಾನದ ವೇಳೆ ವಿವಿಧ ಹಂತಗಳಲ್ಲಿ ರೈತರಿಂದ ಸಂಗ್ರಹಿಸಿದ ಯೋಜನಾ ಮಾಹಿತಿಯ ವರದಿಯನ್ನು ಆಧರಿಸಿ ಪ್ರತಿ ಹಂಗಾಮಿನಲ್ಲಿ ಬೆಳೆವಾರು ಸಂಶೋಧನಾ ಲೇಖನವನ್ನು ಹೊರತರುವುದು.

## III. ಕೃಷಿ ಇಲಾಖೆ :

1. Community Assistant (CA) (ಸಮುದಾಯ ಸಹಾಯಕರು) / Community Resource person (CRP) (ಸಮುದಾಯ ಸಂಪನ್ಮೂಲ ವ್ಯಕ್ತಿ) ಗಳ ಆಯ್ಕೆ ಪ್ರಕ್ರಿಯೆಯನ್ನು KTPP Act ಅನ್ವಯ ಟೆಂಡರ್ ಆಹ್ವಾನಿಸಿ ಸಂಸ್ಥೆಯ ಮುಖಾಂತರ ನೇಮಕ ಮಾಡಿಕೊಳ್ಳುವುದು.
2. CA/CRP ಗಳಿಗೆ ಗೌರವಧನವನ್ನು ನೀಡುತ್ತಿರುವುದರಿಂದ, ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ PF ಮತ್ತು ESI ಅನ್ವಯವಾಗುವುದಿಲ್ಲ. ಸೇವಾ ಶುಲ್ಕ (Service Charge) ಮತ್ತು GST ಮಾತ್ರ ಅನ್ವಯವಾಗುತ್ತದೆ. ಹಾಗೂ ಸಂಸ್ಥೆಗೆ ಗೌರವಧನದ ಅನುದಾನವನ್ನು ಪಾವತಿಸುವ ಮುನ್ನ TDS ಕಡಿತಗೊಳಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
3. CA ನ್ನು ಪ್ರತಿ 2-5 ಕ್ಲಸರ್‌ಗೆ ಒಬ್ಬರಂತೆ (ಗೌರವಧನ ರೂ.10,000/- ಪ್ರತಿ ಮಾಹೆಗೆ) ಮತ್ತು CRP ಗಳನ್ನು ಒಂದು ಕ್ಲಸ್ಟರ್‌ಗೆ ಒಬ್ಬರಂತೆ (ಗೌರವಧನ ರೂ.8,000/- ಪ್ರತಿ ಮಾಹೆಗೆ) ನೇಮಿಸಿಕೊಳ್ಳುವುದು.
4. ಯೋಜನಾ ಪ್ರದೇಶದ ವ್ಯಾಪ್ತಿಯ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರುಗಳ ಮುಖಾಂತರ CA ಮತ್ತು CRP ಗಳು ಕಾರ್ಯ ನಿರ್ವಹಿಸುವುದು.
5. ZBNF ಅನುಷ್ಠಾನ ಮಾಡುವ ಪ್ರತಿ ಕ್ಲಸ್ಟರ್ ಕನಿಷ್ಠ 20 ಹೆಕ್ಟೇರ್ ZBNF ಪ್ರದೇಶವನ್ನು ಹೊಂದಿರುವುದು
6. ಇಲಾಖಾ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯಗಳಿಂದ ನೇಮಕವಾಗಿರುವ RA ಗಳು ಮತ್ತು CA/CRP ಗಳೊಂದಿಗೆ ಸಮನ್ವಯ ಸಾಧಿಸಿ ರೈತರ ಕ್ಷೇತ್ರಗಳಲ್ಲಿ ZBNF ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುವುದು.
7. ಕ್ಲಸ್ಟರ್ ಸಮಿತಿಯು ಆಯ್ಕೆಗೊಂಡ ರೈತರಿಂದ ZBNF ಮಾದರಿಯನ್ನು ಅಳವಡಿಸುವ ಬಗ್ಗೆ ಒಪ್ಪಿಗೆ ಪತ್ರವನ್ನು ಪಡೆಯುವುದು.
8. ಆಯ್ಕೆಗೊಂಡ ಪ್ರತಿ ರೈತರು ತಮ್ಮ ಒಟ್ಟು ಹಿಡುವಳಿಯಲ್ಲಿ ಭಾಗಶ: (ಕನಿಷ್ಠ 10 ಗುಂಟೆ, **ಗರಿಷ್ಠ 1 ಹೆಕ್ಟೇರ್**) ಜಮೀನಿನಲ್ಲಿ ZBNF ಕೈಗೊಳ್ಳುವುದು. ಉಳಿದ ಭಾಗದಲ್ಲಿ ರೈತರು ಈಗಾಗಲೇ ಅನುಷ್ಠಾನ ಮಾಡುತ್ತಿರುವ ವಿಧಾನವನ್ನು ಮುಂದುವರಿಸುವುದು.
9. ಕ್ಲಸ್ಟರ್ ಮಟ್ಟದ ಸಮಿತಿಯನ್ನು ರಚಿಸಿ, ಕೃಷಿ ವಿಶ್ವವಿದ್ಯಾಲಯ ಮತ್ತು ಇಲಾಖೆಗಳ ಸಹಕಾರ ಮತ್ತು ಸಮನ್ವಯದೊಂದಿಗೆ ಅನುಷ್ಠಾನ ಮಾಡಲು ಕ್ರಮ ವಹಿಸುವುದು.
10. ಫಲಾನುಭವಿಯು ದೇಶಿ ಹಸುವನ್ನು ಹೊಂದಿರುವುದು ಅಥವಾ ಹೊಂದಿರುವ ರೈತರಿಂದ ಅಗತ್ಯವಾದ ಸಗಣಿ ಮತ್ತು ಗಂಜಲ ಪಡೆದು ಜೀವಾಮೃತ/ಬೀಜಾಮೃತ ತಯಾರಿಸಿ, ZBNF ಅನುಷ್ಠಾನ ಮಾಡುವುದು.
11. ಆಯ್ಕೆಯಾದ ಪ್ರದೇಶ/ಗುಚ್ಛ ಹಾಗೂ ರೈತರ ಸಂಖ್ಯೆಯನ್ನು ಆಧರಿಸಿ ಜಿಲ್ಲಾ ಸಮಿತಿಯು ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವುದು ಹಾಗೂ ORP ತಂಡದ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು.
12. ಸಂಬಂಧಪಟ್ಟ ಕೃಷಿ ಅಧಿಕಾರಿಯು CA ಮತ್ತು CRP ಗಳ ದಿನಚರಿ ಮತ್ತು ಹಾಜರಾತಿಯನ್ನು ದೃಢೀಕರಿಸುವುದು.

13. ಆಯ್ಕೆಗೊಂಡ ರೈತರಿಗೆ ZBNF ಘಟಕಗಳ ಅನುಷ್ಠಾನಕ್ಕಾಗಿ ಸರ್ಕಾರದ ಮಾನದಂಡಗಳಂತೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಸಹಾಯಧನವನ್ನು DBT ಮುಖಾಂತರ ಪಾವತಿಸುವುದು.

ಈ ಕೆಳಕಂಡ ಘಟಕಗಳಲ್ಲಿ ಕ್ರಮ ಸಂಖ್ಯೆ 1, 2, 4, 5 ಮತ್ತು 9 ನೇ ಘಟಕಗಳಿಗೆ ಮೊದಲ ಆದ್ಯತೆ ನೀಡುವುದು. ಆದಾಗ್ಯೂ ಅನುದಾನ ಲಭ್ಯವಿದ್ದಲ್ಲಿ ಇತರೆ ಘಟಕಗಳ ಅನುಷ್ಠಾನಕ್ಕೆ ಕ್ರಮ ವಹಿಸಬಹುದಾಗಿದೆ.

| ಕ್ರ ಸಂ | ಕಾರ್ಯಕ್ರಮ /ಘಟಕಗಳು | ಸರ್ಕಾರದ ಸಹಾಯಧನ (ರೂ ಗಳಲ್ಲಿ) (ಶೇ.90) | ರೈತರ ವಂತಿಕೆ (ಶೇ.10) |
|---|---|---|---|
| ಅ). ವೈಯಕ್ತಿಕ ಚಟುವಟಿಕೆಗಳು. | | | |
| 1 | ನೆಲಹೊದಿಕೆಗೆ ಬೇಕಾಗಿರುವ ದ್ವಿದಳ ಬೀಜಗಳು (Cover Crop, Border Crop, Trap Crop) ಹಸಿರೆಲೆ ಗೊಬ್ಬರ ಬೀಜ ಇತ್ಯಾದಿ | ಪ್ರತಿ ಎಕರೆಗೆ ರೂ. 1575/- ಪ್ರತಿ ರೈತನಿಗೆ ಗರಿಷ್ಠ 1 ಹೆಕ್ಟೇರ್ | ರೂ. 175/ ಎಕರೆ |
| 2 | ಬೀಜ ಮತ್ತು ಸಸಿಗಳ ವಿತರಣೆ, (Inter crop, Multi crop) ತೋಟಗಾರಿಕೆ ಬೆಳೆಗಳ ಸಸಿಗಳು/ ತರಕಾರಿ ಬೀಜಗಳು | ಪ್ರತಿ ಎಕರೆಗೆ ರೂ.1575/- ಪ್ರತಿ ರೈತನಿಗೆ ಗರಿಷ್ಠ 2 ಎಕರೆ | ರೂ. 175/ ಎಕರೆ |
| 3 | ದ್ರವರೂಪದ ಬೀಜಾಮೃತ/ ಜೀವಾಮೃತ ಇತ್ಯಾದಿ ತಯಾರಿಕೆಗೆ 400 ಲೀ. ಸಾಮರ್ಥ್ಯದ ಸಿಮೆಂಟ್ ತೊಟ್ಟಿ | 3600/- | 400/- |
| 4 | ದ್ರವರೂಪದ ಬೀಜಾಮೃತ/ ಜೀವಾಮೃತ ಇತ್ಯಾದಿ ತಯಾರಿಕೆಗೆ 200 ಲೀ. ಸಾಮರ್ಥ್ಯದ ಪ್ಲಾಸ್ಟಿಕ್ ಡ್ರಂಗಳು | 720/- | 80/- |
| 5 | ಜೀವಾಮೃತ ಹಾಗೂ ಬೀಜಾಮೃತ ಮಿಶ್ರಣಗಳನ್ನು ತಯಾರಿಸಲು ಬೇಕಾಗುವ ಕಚ್ಚಾ ವಸ್ತುಗಳಿಗಾಗಿ | 3600/- | 400/- |
| 6 | ಎರಡು ಹಸು ನಿಲ್ಲುವ ಜಾಗಕ್ಕೆ ನೆಲಹಾಸು (ಗಂಜಲ ಸಂಗ್ರಹಿಸುವ ತೊಟ್ಟಿಯನ್ನೊಳಗೊಂಡಂತೆ) 10X12 ಅಡಿ ವಿಸ್ತೀರ್ಣ | 8100/- | 900/- |
| 7 | ಪ್ರತ್ಯೇಕ ಗಂಜಲ ಸಂಗ್ರಹಿಸುವ ತೊಟ್ಟಿ - 2' X 2' X 2' | 765/- | 85/- |
| 8 | ಅ. ಬಯೋಡೈಜೆಸ್ಟರ್ – ಡೈಜೆಸ್ಟರ್ ತೊಟ್ಟಿ 10' x 4' x 4' ಶೇಖರಣಾ ತೊಟ್ಟಿ 4' x 4' x 4' | 25200/- | 2800/- |
| | ಆ. ಬಯೋಡೈಜೆಸ್ಟರ್ – ಡೈಜೆಸ್ಟರ್ ತೊಟ್ಟಿ 15' x 4' x 4' ಶೇಖರಣಾ ತೊಟ್ಟಿ 5' x 4' x 4' | 36000/- | 4000/- |
| 9 | ಬಹು ವಾರ್ಷಿಕ ಮೇವಿನ ಸಂಪನ್ಮೂಲ ಅಭಿವೃದ್ಧಿ (ಕನಿಷ್ಠ 5 ಗುಂಟೆ ಪ್ರದೇಶದಲ್ಲಿ – ಬಹುವಾರ್ಷಿಕ ಮೇವಿನ ಬೆಳೆ ಸ್ಥಾಪನೆ) | 2700/- | 300/- |
| 10 | ZBNF ಅಡಿ ಕೈಗೊಳ್ಳುವ ಇತರೆ ಘಟಕಗಳ ಅನುಷ್ಠಾನಕ್ಕಾಗಿ | 5000/- | - |
| 2. ಸಮುದಾಯ ಚಟುವಟಿಕೆಗಳು. | | | |
| 1 | ನಾಟಿ ತಳಿಗಳ ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆಗೆ | 10000/- | - |
| 2 | ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ (CHSC) ಶುಲ್ಕ | 5000/- | |
| ಷರಾ : ಅವಶ್ಯಕತೆಗನುಗುಣವಾಗಿ ನರೇಗಾ ಯೋಜನೆ ಒಗ್ಗೂಡಿಸುವಿಕೆಯೊಂದಿಗೂ ಸಹ ಮೇಲಿನ ಘಟಕಗಳನ್ನು ಅನುಷ್ಠಾನ ಮಾಡಬಹುದಾಗಿರುತ್ತದೆ. | | | |

14. ಜಿಲ್ಲಾ ಸಮಿತಿಯ ನೇತೃತ್ವದಲ್ಲಿ CA ಮತ್ತು CRP ಗಳು ಯೋಜನಾ ಪ್ರದೇಶದ ಆಯ್ದ ರೈತರ ತಾಕಿನಲ್ಲಿ ZBNF ಮಾದರಿಯನ್ನು ಸರಿಯಾದ ರೀತಿಯಲ್ಲಿ ಅಳವಡಿಸುವ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ವಿವಿಧ ಹಂತಗಳಲ್ಲಿ ಛಾಯಚಿತ್ರಗಳನ್ನು ದಾಖಲೀಕರಿಸುವುದು.
15. ಕ್ಲಸ್ಟರ್ ಸಮಿತಿಯು ಫಲಾನುಭವಿ ರೈತರುಗಳ ಬೇಡಿಕೆ ಹಾಗೂ ಯೋಜನಾ ಅನುಷ್ಠಾನ ಪ್ರದೇಶದ ಅವಶ್ಯಕತೆಗನುಗುಣವಾಗಿ ಮುಂದಿನ ಹಂಗಾಮಿಗೆ ಕ್ರಿಯಾ ಯೋಜನೆ ಸಿದ್ದಪಡಿಸುವುದು.
16. ಜಿಲ್ಲೆಯ ಎಲ್ಲಾ ಅಭಿವೃದ್ಧಿ ಇಲಾಖೆಗಳ ರೈತರ ಹಾಗೂ ಗ್ರಾಮೀಣ ಅಭಿವೃದ್ದಿಗೆ ಸಂಬಂಧಿಸಿದ ಯೋಜನೆ (ಸಮಗ್ರ ಕೃಷಿ ಪದ್ದತಿಯನ್ನು ಒಳಗೊಂಡಂತೆ) ಗಳನ್ನು ಒಗ್ಗೂಡಿಸಿ ಯೋಜನಾ ಪ್ರದೇಶದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು ಹಾಗೂ ಈ ಸಂಬಂಧ ಸಮಿತಿಗಳಲ್ಲಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳ ಅಧಿಕಾರಿಗಳನ್ನು ಸೇರಿಸಿಕೊಳ್ಳುವುದು. ಉದಾ: ಪಶು ಸಂಗೋಪನಾ, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ, ಅರಣ್ಯ ಇಲಾಖೆ ಇತರೆ.
17. ZBNF ಅಳವಡಿಸಿಕೊಳ್ಳುವ ರೈತರಿಗೆ ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಲೆಕ್ಕಶೀರ್ಷಿಕೆ: 2401–00–104–0–12, ಉಪ ಶೀರ್ಷಿಕೆ: 059 ರಡಿ ಅನುಮೋದಿತ ಪ್ರೋತ್ಸಾಹ ಧನವನ್ನು ನಿಯಮಾನುಸಾರ DBT ಮುಖಾಂತರ ಪಾವತಿಸುವುದು.
18. ನೈಸರ್ಗಿಕ ಕೃಷಿ ಯೋಜನೆಯ ಉಸ್ತುವಾರಿ ಮತ್ತು ಮೌಲ್ಯಮಾಪನ: ರಾಜ್ಯ ಮಟ್ಟದ ಉಪ ಸಮಿತಿಯು ಉಸ್ತುವಾರಿ ಸಮಿತಿಯನ್ನು ರಚಿಸುವುದು. ಸದರಿ ಸಮಿತಿಯು ವಿವಿಧ ಹಂತಗಳಲ್ಲಿ ಎಲ್ಲಾ ವಲಯಗಳಿಗೆ ಭೇಟಿ ನೀಡಿ ZBNF ಚಟುವಟಿಕೆಗಳ ಉಸ್ತುವಾರಿ ಕೈಗೊಳ್ಳುವುದು. ಅಲ್ಲದೇ ರಾಜ್ಯ ಮಟ್ಟದ ಉಪ ಸಮಿತಿಯು ZBNF ಯೋಜನೆಯ ಮೌಲ್ಯಮಾಪನವನ್ನು ಆಯ್ದ ಬಾಹ್ಯ ಸಂಸ್ಥೆಯ ಮೂಲಕ ಕೈಗೊಳ್ಳುವುದು.
19. ಯೋಜನಾ ಪ್ರದೇಶದ ರೈತರನ್ನು ಸಂಘಟನೆಗೊಳಿಸಿ ಗುಂಪು ರಚಿಸಿ, Karnataka Societies Registration Act-1960 ಅಡಿಯಲ್ಲಿ ನೊಂದಾಯಿಸಲು ಸಹಕರಿಸುವುದು.
20. ನೋಂದಣಿಯಾದ ಗುಂಪಿನ ಕ್ಷೇತ್ರಗಳನ್ನು 2018–19ನೇ ಸಾಲಿನಿಂದ ಅನುಷ್ಠಾನ ಮಾಡುತ್ತಿರುವ ಸಾವಯವ ಕೃಷಿ ಮತ್ತು ದೃಢೀಕರಣ ಕಾರ್ಯಕ್ರಮದಡಿ ಪ್ರಮಾಣೀಕರಿಸಲು ಆಧ್ಯತೆ ನೀಡುವುದು. ಹಾಗೂ ಪ್ರತ್ಯೇಕವಾಗಿ ರೈತರು ಪ್ರಮಾಣೀಕರಣಕ್ಕೆ ಆಸಕ್ತಿ ತೋರಿದಲ್ಲಿ, ಪರಿಗಣಿಸುವುದು. ಹಾಗೂ PGS ದೃಢೀಕರಣಕ್ಕೆ ಒಳಪಡಿಸುವುದು.

ಕೃಷಿ ನಿರ್ದೇಶಕರು

**2019–20 ನೇ ಸಾಲಿನ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯ ಘಟಕಾವಾರು ಅನುದಾನ ಹಂಚಿಕೆ**

(ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಹಂಚಿಕೆ | ಘಟಕಗಳು | ಅನುದಾನ |
|---|---|---|---|
| 1 | ಜಿಲ್ಲೆಗಳು | CA ಸಂಭಾವನೆ | 275.00 |
| | | CRP ಸಂಭಾವನೆ | 525.00 |
| | | ಬೀಜ ಮತ್ತು ಸಸಿಗಳ ವಿತರಣೆ, ಬೀಜಾಮೃತ/ ಜೀವಾಮೃತ ತಯಾರಿಕೆಗೆ ಬೇಕಾಗುವ ಕಚ್ಚಾವಸ್ತುಗಳು, ಪ್ಲಾಸ್ಟಿಕ್ ಡ್ರಮ್/ಸಿಮೆಂಟ್ ತೊಟ್ಟಿ, ನೆಲಹಾಸು, ಗಂಜಲ ಸಂಗ್ರಹಿಸುವ ತೊಟ್ಟಿ, ಬಯೋಡೈಜೆಸ್ಟರ್, ಮೇವಿನ ಬೆಳೆ ಇತ್ಯಾದಿ ಗಳಿಗೆ ಸಹಾಯಧನ | 2358.31 |
| 2 | ಕೇಂದ್ರ ಕಚೇರಿ | ಕಾರ್ಯಾಗಾರ, ವಿಚಾರಗೋಷ್ಠಿ (Seminars), ರಾಜ್ಯ ಮಟ್ಟದ ತರಬೇತಿಗಳನ್ನು ಆಯೋಜಿಸುವುದು ಮತ್ತು ಭಾಗವಹಿಸುವುದು. ಸಮೂಹ ಮತ್ತು ಮುದ್ರಣ ಮಾದ್ಯಮಗಳ ಮೂಲಕ ಪ್ರಚಾರ ಕಾರ್ಯಕ್ರಮ, ಉಸ್ತುವಾರಿ ಮತ್ತು ಮೌಲ್ಯಮಾಪನ, ಮೇಳಗಳು, ವಸ್ತುಪ್ರದರ್ಶನ | 250.00 |
| 3 | ಕೃಷಿ ವಿಶ್ವವಿದ್ಯಾಲಯಗಳು | ಮಾನವ ಸಂಪನ್ಮೂಲ ಅಭಿವೃದ್ಧಿ, ಆಡಳಿತಾತ್ಮಕ ವೆಚ್ಚ, ಪ್ರಯೋಗಾಲಯ ವೆಚ್ಚ, ಪ್ರಯಾಣ ವೆಚ್ಚ, ಸಂಶೋಧನಾ ವೆಚ್ಚ, ಕಚೇರಿ ಸ್ಥಾಪನೆ, ಸಂಸ್ಥೆಯ ವೆಚ್ಚ, ವಾಹನ ಬಾಡಿಗೆ | 591.69 |
| | | ಒಟ್ಟು | 4000.00 |

ಕೃಷಿ ನಿರ್ದೇಶಕರು

**2019–20 ನೇ ಸಾಲಿನ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯ ಜಿಲ್ಲಾವಾರು ಗುರಿ**

| ಕ್ರ ಸಂ | ಜಿಲ್ಲೆಯ ಹೆಸರು | CA/CRP ಗಳ ಗೌರವಧನ | | ವಿವಿಧ ಘಟಕಗಳಿಗೆ ಸಹಾಯಧನ | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ (ರೈತರ ಸಂಖ್ಯೆ) | ಆರ್ಥಿಕ |
| 1 | ಬೆಂಗಳೂರು | 16 | 20.00 | 1309 | 130.90 |
| 2 | ಬಾಗಲಕೋಟೆ | 25 | 32.00 | 343 | 34.30 |
| 3 | ವಿಜಯಪುರ | 20 | 25.00 | 386 | 38.60 |
| 4 | ಬೀದರ್ | 40 | 51.00 | 2073 | 207.30 |
| 5 | ಬೆಳಗಾವಿ | 47 | 59.00 | 1115 | 111.50 |
| 6 | ಬಳ್ಳಾರಿ | 20 | 26.00 | 683 | 68.30 |
| 7 | ಚಿತ್ರದುರ್ಗ | 15 | 19.00 | 475 | 47.50 |
| 8 | ಚಿಕ್ಕಮಗಳೂರು | 16 | 21.00 | 646 | 64.60 |
| 9 | ಚಿಕ್ಕಬಳ್ಳಾಪುರ | 20 | 26.00 | 716 | 71.60 |
| 10 | ಚಾಮರಾಜನಗರ | 23 | 30.00 | 510 | 51.00 |
| 11 | ಧಾರವಾಡ | 13 | 17.00 | 252 | 25.20 |
| 12 | ದಾವಣಗೆರೆ | 28 | 36.00 | 747 | 74.70 |
| 13 | ದಕ್ಷಿಣ ಕನ್ನಡ | 23 | 29.00 | 789 | 78.90 |
| 14 | ಕಲಬುರ್ಗಿ | 10 | 14.00 | 442 | 44.20 |
| 15 | ಗದಗ | 14 | 19.00 | 324 | 32.40 |
| 16 | ಕೊಡಗು | 4 | 6.00 | 218 | 21.80 |
| 17 | ಕೊಪ್ಪಳ | 15 | 20.00 | 210 | 21.00 |
| 18 | ಕೋಲಾರ | 17 | 22.00 | 504 | 50.40 |
| 19 | ಹಾವೇರಿ | 20 | 26.00 | 538 | 53.80 |
| 20 | ಹಾಸನ | 26 | 33.00 | 1284 | 128.40 |
| 21 | ಮೈಸೂರು | 36 | 44.00 | 1876 | 187.60 |
| 22 | ಮಂಡ್ಯ | 20 | 26.00 | 1676 | 167.60 |
| 23 | ರಾಮನಗರ | 16 | 21.00 | 611 | 61.10 |
| 24 | ರಾಯಚೂರು | 35 | 44.00 | 619 | 61.90 |
| 25 | ಶಿವಮೊಗ್ಗ | 9 | 12.00 | 1058 | 105.80 |
| 26 | ತುಮಕೂರು | 25 | 32.00 | 1626 | 162.60 |
| 27 | ಉಡುಪಿ | 12 | 16.00 | 761 | 76.10 |
| 28 | ಉತ್ತರ ಕನ್ನಡ | 33 | 42.00 | 1310 | 131.00 |
| 29 | ಯಾದಗಿರಿ | 25 | 32.00 | 481 | 48.21 |
| ಒಟ್ಟು | | 623 | 800.00 | 23582 | 2358.31 |

ಕೃಷಿ ನಿರ್ದೇಶಕರು

## ಯೋಜನಾ ಅನುಷ್ಠಾನಕ್ಕಾಗಿ ಸಮುದಾಯ ಸಂಪನ್ಮೂಲ ವ್ಯಕ್ತಿ (Community Resource Person) ಗಳು ನಿರ್ವಹಿಸಬೇಕಾದ ಕರ್ತವ್ಯಗಳು

- CRP ಯು ಆಯ್ಕೆಯಾಗುವ ಯೋಜನಾ ಪ್ರದೇಶದ ZBNF ಅಳವಡಿಸಿರುವ / ಆಸಕ್ತಿಯಿರುವ ರೈತನಾಗಿರಬೇಕು.
- CRP ಯು ಸದೃಢನಾಗಿದ್ದು, ಕ್ಷೇತ್ರಗಳಿಗೆ ಭೇಟಿ ನೀಡಿ ZBNF ಅನುಷ್ಠಾನ ಮಾಡುವಂತಿರಬೇಕು.
- ಯೋಜನಾ ಪ್ರದೇಶದ ಕನಿಷ್ಠ 20 ಹೆಕ್ಟೇರ್ ವಿಸ್ತೀರ್ಣದ ಪ್ರತಿ ಕ್ಲಸ್ಟರ್‌ನ ಪ್ರತಿನಿಧಿಯಾಗಿರುತ್ತಾನೆ.
- ಆಯ್ಕೆಯಾಗುವ ಯೋಜನಾ ಪ್ರದೇಶದ ಫಲಾನುಭವಿಗಳ ಆಯ್ಕೆ ಮಾಡುವುದು.
- ಆಯ್ಕೆಯಾಗುವ ಯೋಜನಾ ಪ್ರದೇಶದ ಫಲಾನುಭವಿಗಳ ಮೂಲ ಸಮೀಕ್ಷೆಯನ್ನು ಕೈಗೊಳ್ಳುವುದು.
- ಯೋಜನಾ ಪ್ರದೇಶದ ಫಲಾನುಭವಿಗಳಿಗೆ ನೀಡುವ ವಿವಿಧ ತರಬೇತಿಗಳಿಗೆ ಸ್ಥಳೀಯ ಸಂಪನ್ಮೂಲಗಳನ್ನು ಒದಗಿಸಿ ಸಮನ್ವಯಗೊಳಿಸುವುದು.
- ಆ ವ್ಯಾಪ್ತಿಯ ರೈತರುಗಳಿಗೆ ನೈಸರ್ಗಿಕ ಕೃಷಿ ತಾಕುಗಳಿಗೆ ಏರ್ಪಡಿಸುವ ಅಧ್ಯಯನ ಪ್ರವಾಸ ಕೈಗೊಳ್ಳಲು ನೆರವು ನೀಡುವುದು.
- ಯೋಜನಾ ಪ್ರದೇಶದ ಮಣ್ಣು ಮತ್ತು ನೀರು ಮಾದರಿ ಸಂಗ್ರಹಿಸಿ ಸಮುದಾಯ ಸಹಾಯಕರಿಗೆ ಸಲ್ಲಿಸುವುದು.
- ಮಣ್ಣು ಮತ್ತು ನೀರು ಮಾದರಿ ವಿಶ್ಲೇಷಣಾ ವರದಿಯನ್ನು ಕಡ್ಡಾಯವಾಗಿ ಫಲಾನುಭವಿಗಳಿಗೆ ತಲುಪಿಸುವುದು.
- ಯೋಜನಾ ಪ್ರದೇಶದ ವ್ಯಾಪ್ತಿಯ ಪ್ರತಿ ಫಲಾನುಭವಿಯ ಕ್ಷೇತ್ರಗಳಿಗೆ ನಿಯಮಿತವಾಗಿ ಭೇಟಿ ನೀಡುವುದು ಮತ್ತು ಆ ಪ್ರದೇಶಕ್ಕೆ ಸೂಕ್ತ ಬೆಳೆ ಪದ್ಧತಿ ಅನುಸರಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.
- ಆಯ್ದ ರೈತರುಗಳ ಕ್ಷೇತ್ರಗಳಿಂದ **ZBNF** ಉತ್ಪನ್ನಗಳ ಮಾದರಿ ಸಂಗ್ರಹಿಸಿ ಸಮುದಾಯ ಸಹಾಯಕರಿಗೆ ಸಲ್ಲಿಸುವುದು.
- ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯಗಳಿಂದ ವಹಿಸುವ ಇನ್ನಿತರೆ ಕರ್ತವ್ಯಗಳು

## ಯೋಜನಾ ಅನುಷ್ಠಾನಕ್ಕಾಗಿ ಸಮುದಾಯ ಸಹಾಯಕರು (Community Assistant) ನಿರ್ವಹಿಸಬೇಕಾದ ಕರ್ತವ್ಯಗಳು

- CA ಯು ಆಯ್ಕೆಯಾಗುವ ಯೋಜನಾ ಪ್ರದೇಶದ ZBNF ಅಳವಡಿಸಿರುವ / ಆಸಕ್ತಿಯಿರುವ ರೈತನಾಗಿದ್ದು, ಕನಿಷ್ಠ ಹತ್ತನೇ ತರಗತಿಯ ವಿದ್ಯಾರ್ಹತೆ ಹೊಂದಿರಬೇಕು.
- CA ಯು ಸದೃಢನಾಗಿದ್ದು, ZBNF ಕ್ಷೇತ್ರಗಳಿಗೆ ಭೇಟಿ ನೀಡುವಂತಿರಬೇಕು.
- ಯೋಜನಾ ಪ್ರದೇಶದ ತಲಾ ಕನಿಷ್ಠ 20 ಹೆಕ್ಟೇರ್ ವಿಸ್ತೀರ್ಣದ 2-5 ಕ್ಲಸ್ಟರ್‌ಗಳ ಪ್ರತಿನಿಧಿಯಾಗಿರುತ್ತಾನೆ.
- ಆಯ್ಕೆಯಾಗುವ ಯೋಜನಾ ಪ್ರದೇಶದ ಫಲಾನುಭವಿಗಳಿಗೆ ನೈಸರ್ಗಿಕ ಕೃಷಿಯ ಬಗ್ಗೆ ನೀಡಲಾಗುವ ಎಲ್ಲಾ ತರಬೇತಿಗಳ ಸಂಪೂರ್ಣ ಜವಾಬ್ದಾರಿ ವಹಿಸುವುದು.
- CA ಯು ಸಂಬಂಧಿಸಿದ ಕ್ಲಸ್ಟರ್‌ಗಳ Trainer of Trainer (TOT) ಆಗಿ ಕರ್ತವ್ಯ ನಿರ್ವಹಿಸುವುದು
- CRP ಕೈಗೊಳ್ಳುವ ಆಯ್ಕೆಯಾಗುವ ಯೋಜನಾ ಪ್ರದೇಶದ ಫಲಾನುಭವಿಗಳ ಮೂಲ ಸಮೀಕ್ಷೆಯ ಮೇಲುಸ್ತುವಾರಿ ಕೈಗೊಂಡು ದಾಖಲೀಕರಿಸುವುದು.
- ಯೋಜನಾ ಪ್ರದೇಶದ ವ್ಯಾಪ್ತಿಯ ರೈತರುಗಳಿಗೆ ಏರ್ಪಡಿಸುವ ಅಧ್ಯಯನ ಪ್ರವಾಸಕ್ಕೆ ಅವಶ್ಯಕ ಸಿದ್ಧತೆಗಳನ್ನು ಮುಂಚಿತವಾಗಿ ಕೈಗೊಳ್ಳುವುದು.
- ಸಮುದಾಯ ಸಂಪನ್ಮೂಲ ವ್ಯಕ್ತಿಯು ಸಲ್ಲಿಸುವ ಮಣ್ಣು ಮತ್ತು ನೀರು ಮಾದರಿಗಳನ್ನು ಸಂಬಂಧಿಸಿದ ರಾಜ್ಯ/ಕೇಂದ್ರ/ICAR/SAU ಪ್ರಯೋಗಾಲಯಗಳಿಗೆ ವಿಶ್ಲೇಷಣೆಗಾಗಿ ಸಲ್ಲಿಸುವುದು.
- ಮಣ್ಣು ಮತ್ತು ನೀರು ಮಾದರಿ ವಿಶ್ಲೇಷಣಾ ವರದಿಯ ಫಲಿತಾಂಶದ ಆಧಾರದ ಮೇಲೆ ಸೂಕ್ತ ನೈಸರ್ಗಿಕ ಉತ್ಪಾದನಾ ತಾಂತ್ರಿಕತೆಗಳ ಬಗ್ಗೆ ಸಂಶೋಧನಾ ಸಹಾಯಕ (RA) ರೊಂದಿಗೆ ಗುಂಪಿನ ಸದಸ್ಯರುಗಳಿಗೆ ಮಾರ್ಗದರ್ಶನ ಮತ್ತು ಮಾಹಿತಿ ನೀಡುವುದು.
- ಯೋಜನಾ ಪ್ರದೇಶದ ವ್ಯಾಪ್ತಿಯ ಪ್ರತಿ ಕ್ಲಸ್ಟರ್‌ನ ಫಲಾನುಭವಿಯ ಕ್ಷೇತ್ರಗಳಿಗೆ ನಿಯಮಿತವಾಗಿ ತಪಾಸಣಾ ಭೇಟಿ ನೀಡುವುದು ಮತ್ತು ಆ ಪ್ರದೇಶಕ್ಕೆ ಸೂಕ್ತ ಬೆಳೆ ಪದ್ಧತಿ ಅನುಸರಿಸಿರುವುದನ್ನು ಖಾತರಿಪಡಿಸಿಕೊಂಡು ದಾಖಲೀಕರಿಸುವುದು.
- ತಪಾಸಣಾ ಭೇಟಿಯಲ್ಲಿ ಕಂಡುಬಂದ ಅಂಶಗಳ ವಿವರಗಳನ್ನು ದಿನಚರಿಯಲ್ಲಿ ನಮೂದಿಸಿಕೊಳ್ಳುವುದು ಹಾಗೂ ORP ತಂಡದ ಗಮನಕ್ಕೆ ತರುವುದು.
- ಸ್ವೀಕರಿಸಿದ **ZBNF** ಉತ್ಪನ್ನಗಳ ಮಾದರಿಗಳನ್ನು ವಿಶ್ಲೇಷಣೆಗಾಗಿ (Residue Analysis) ನಿಗದಿಪಡಿಸಿದ ಪ್ರಯೋಗಾಲಯಗಳಿಗೆ ಕಳುಹಿಸಿಕೊಡುವುದು.
- ಯೋಜನಾ ಪ್ರದೇಶದ ವ್ಯಾಪ್ತಿಯ ರೈತರುಗಳು ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ DBT ಘಟಕಗಳ ಕ್ರಿಯಾ ಯೋಜನೆ ರೂಪಿಸಿ ಆ ಜಿಲ್ಲೆಗೆ ಸಂಬಂಧಪಟ್ಟ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಸಮಿತಿಯಲ್ಲಿ ಅನುಮೋದನೆ ಪಡೆಯುವುದು.
- ನೈಸರ್ಗಿಕ ಕೃಷಿಯಲ್ಲಿ ಬಳಕೆಯಾಗಬಲ್ಲ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರಿತ ಕೃಷಿ ಯಂತ್ರೋಪಕರಣಗಳ ಸೇವಾ ಕೇಂದ್ರಗಳಿಂದ ಬಾಡಿಗೆಗೆ ಪಡೆಯಲು ಕ್ರಮ ವಹಿಸುವುದು.
- ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯಗಳಿಂದ ವಹಿಸುವ ಇನ್ನಿತರೆ ಕರ್ತವ್ಯಗಳು

# ರೈತರ ಒಪ್ಪಿಗೆ ಪತ್ರದ ನಮೂನೆ

ಶ್ರೀ.____________________ ಬಿನ್ ____________________ ಆದ ನಾನು ____________________ಜಿಲ್ಲೆ, ____________________ತಾಲ್ಲೂಕು, ____________________ ಗ್ರಾಮದ ವಾಸಿಯಾಗಿದ್ದು, ಕೃಷಿ ಇಲಾಖೆ ಮುಖಾಂತರ ಅನುಷ್ಠಾನ ಮಾಡುತ್ತಿರುವ **2018–19** ನೇ ಸಾಲಿನ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯನ್ನು ನನ್ನ -------- ಎಕರೆ/ಗುಂಟೆ ಜಮೀನಿನಲ್ಲಿ ಅಳವಡಿಸಿಕೊಳ್ಳಲು ಈ ಮೂಲಕ ಒಪ್ಪಿರುತ್ತೇನೆ.

ರೈತರ ಸಹಿ :

ರೈತರ ಹೆಸರು :